borewells (16 fitted with hand pumps and 4 with power pumps) drilled under scarcity works. Water is being supplied once in three days.

To combat immediate scarcity of water 10 additional bore wells have been drilled now, provided under Chief Minister's drought relief funds at the cost of Rs. 2.50 lakhs . It is proposed to harness the three high yielding borewells with power pumps. Government has been requested to release Rs. 3.00 lakhs for this again under Chief Minister's drought relief funds. The total number of borewells provided so far is 41 numbers of which 11 numbers are failures 23 numbers are fitted with hand pumps and 4 numbers with power pumps. Three high yielding borewells recently drilled are to be fitted with power pumps. In addition, TMC has also drilled 11 borewells out of their own resources. There are three high yield borewells in this also.

To solve water supply problem on permanent basis, a scheme with river Vedaganga as source has been proposed at a cost of Rs. 110.00 lakhs. This scheme is under process and will be submitted to the Government early for administrative approval.

11 ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಪೂರೈಸಿದ ಬಗ್ಗೆ ಬಾಕಿ ಹಣವನ್ನು ನೀಡದೇ ಇರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) — ಸನ್ಮಾನ್ಯ ಅಧ್ಯಕ್ಷರೇ, ಹೋದವರ್ಷ ಸಕ್ಕರೆ ಕಾರ್ಖಾನೆಗಳಿಗೆ ಪೂರೈಸಿದ ಕಬ್ಬಿನ ಬಿಲ್ಲನ್ನು ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಹೊಸ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿ ಮುಗಿಯಲಿಕ್ಕೆ ಬಂದರೂ ಹೋದವರ್ಷ ಪೂರೈಕೆ ಮಾಡಿದ ಕಬ್ಬಿನ ಪೂರ್ತಿ ಹಣವನ್ನು ಪೂರೈಕೆದಾರರಿಗೆ ಕೊಟ್ಟಿರುವುದಿಲ್ಲ. ಸರಕಾರದ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕಬ್ಬು ಪೂರೈಕೆದಾರರ ಕಬ್ಬಿನ ಬಿಲ್ಲುಗಳಲ್ಲಿ ಕೆಲವೊಂದು ಸಂಘ ಸಂಸ್ಥೆಗಳ ಹೆಸರಿನಲ್ಲಿ ಲಕ್ಷಾಂತರ ರೂಪಾಯಿಗಳ ಹಣವನ್ನು ಕಡಿತ ಮಾಡುತ್ತಿದ್ದ, ಇದರ ಮೇಲೆ ಸರಕಾರದ ಯಾವುದೇ ಹಿಡಿತವಿಲ್ಲ.

ಪೂರೈಕೆ ಮಾಡಿದ ಕಬ್ಬಿನ ಬಿಲ್ಲಿನಲ್ಲಿ ಸಕ್ಕರೆ ಕಾರ್ಖಾನೆಗಳ ಚೇರ್ಮನ್ನರ ನಿಧಿ, ಸಂಘಸಂಸ್ಥೆಗಳ ಹೆಸರಿನಲ್ಲಿ ಸಂಗ್ರಹಣೆ ಮಾಡುವ ನಿಧಿ, ಮುಖ್ಯಮಂತ್ರಿಗಳ ಹೆಸರಿನ ಮೇಲೆ ಸಂಗ್ರಹಣೆ ಮಾಡುವ ನಿಧಿ, ಮಲ್ಲಾರಿಗೌಡರ ಹೆಸರಿನ ಮೇಲೆ ಸಂಗ್ರಹ ಮಾಡುವ ನಿಧಿ, ಈ ತರಹದಿಂದ ಕಡಿತ ಮಾಡುತ್ತಿರುವ ಹಣದ ದುರುಪಯೋಗ ಆಗುತ್ತಿದ್ದು ಮಹಾರಾಷ್ಟ್ರದಲ್ಲಿರುವ ನಿಯಮಾವಳಿ ಪ್ರಕಾರ ಸರಕಾರದ ಕಡಿತ ಮಾಡಿದ ಹಣದ ಮೇಲೆ ನಿಯಂತ್ರಣ ಇರಬೇಕಾಗುತ್ತದೆ, ಏರಿಯಾ ಡೆವಲಪ್‌ಮೆಂಟ್ ಫಂಡ್, ಮುಖ್ಯಮಂತ್ರಿಗಳ ನಿಧಿ, ಕಬ್ಬು ಬೆಳೆಯ ಸುಧಾರಣಾ ನಿಧಿ ಹಾಗೂ ಸರ್ಕಾರದ ಸಾರ್ವಜನಿಕ ಹಿತದ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಕಡಿತ ಮಾಡಿರುವ ನಿಧಿಯ ಮೇಲೆ ಸರ್ಕಾರದ ನಿಯಂತ್ರಣ ಇಲ್ಲದೇ ಹೋಗಲ್ಲಿ ಇಂತಹ ಕಡಿತದಿಂದ ಕಬ್ಬು ಬೆಳೆಗಾರರಿಗೆ ತೊಂದರೆಯಾದರೂ ಕೂಡ ಒಂದು ಕಾರ್ಖಾನೆಯು ವಿರುದ್ಧವಾಗಿ ಮಾತನಾಡುವುದು ಅಸಾಧ್ಯ, ರಾಜ್ಯಸರ್ಕಾರದ ವಿರುದ್ಧ ಹಾಗೂ ಕೇಂದ್ರಸರ್ಕಾರದ ವಿರುದ್ಧ ಮಾತನಾಡುವುದು, ಆರೋಪ ಮಾಡುವುದು, ಜನರಿಗೆ ಕೊಟ್ಟಿರುವ ಪ್ರಜಾಪ್ರಭುತ್ವದ ಹಕ್ಕು. ಆದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳ ವಿರುದ್ಧ ಮಾತನಾಡಿದರೆ ಕಬ್ಬನ್ನು ಒಣಗಿಸಿ, ಕಬ್ಬು ಬೆಳೆಗಾರರನ್ನು ಆರ್ಥಿಕವಾಗಿ

ಚಿತ್ರಹಿಂಸೆ ಮಾಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಬರಗಾಲದಲ್ಲಿದ್ದ ರೈತನ ಕಬ್ಬಿನ ಬಿಲ್ಲಿನಲ್ಲಿ ಯಾವುದೇ ಕಡಿತ ಮಾಡದೆ ಸಂಪೂರ್ಣವಾದ ಬಿಲ್ಲನ್ನು ಕೊಡುವಂತೆ ಆದೇಶ ಮಾಡಬೇಕು. ಈಗಾಗಲೇ ಕಡಿತ ಮಾಡಿದ್ದಲ್ಲಿ ಅದನ್ನು ಕಬ್ಬು ಬೆಳೆಗಾರರಿಗೆ ವಾಪಸ್ಸು ನೀಡಬೇಕಾಗಿ ಒತ್ತಾಯ ಸಂತ್ತೇನೆ. ಹಾಗೂ ಈ ಬಗ್ಗೆ ಕೈಗಾರಿಕಾ ಸಹಕಾರ ಸಚಿವರಿಂದ ಸದನದಲ್ಲಿ ಹೇಳಿಕೆಯನ್ನು ಬಯಸಂತ್ತೇನೆ.

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಬ್ಯಾಲೆನ್ಸ್ ಆಫ್ ಪೇಮೆಂಟ್ ಆಫ್ ಕೇನ್ ಪ್ರೈಸ್ ೩೧-೧೦-೮೮ರವರೆಗೆ ನನ್ನ ಕಡೆ ಬಂದಿರುವ ಮಾಹಿತಿ ಪ್ರಕಾರ, ೧೯೮೬-೮೭ರೊಳಗೆ ೨೪,೨೪ ಲಕ್ಷ ರೂಪಾಯಿಗಳಾಗಿತ್ತು, ಅದರೊಳಗೆ ಭದ್ರಾ ಸಹಕಾರ ಸಕ್ಕರೆ ಫಾಕ್ಟರಿಗೆ ಸಂಬಂಧಪಟ್ಟಂತೆ ೧೯.೨೭ ಲಕ್ಷ ಇದೆ. ಉಳಿದ ಎಲ್ಲಾ ಕಾರ್ಖಾನೆಗಳು ನೀಡಬೇಕಾದ ೫ ಲಕ್ಷ ಏನಿದೆ, ಇದು ಸ್ಕಾಲ್ ಬ್ಯಾಲೆನ್ಸ್ ಇದೆ. ಆದಷ್ಟು ಬೇಗ ಕ್ಲಿಯರ್ ಮಾಡಿ ಎಂದು ನಾನು ಎಲ್ಲರಿಗೂ ಸೂಚನೆ ಕೊಟ್ಟಿದ್ದೇನೆ. ಇನ್ನು ಕೆಲವೊಂದು ಸಂಘಸಂಸ್ಥೆಗಳ ಹೆಸರಿನಲ್ಲಿ ಕೇನ್ ಪೇಮೆಂಟ್‌ನಲ್ಲಿ ಡಿಡೆಕ್ಷನ್ ಮಾಡುತ್ತಿದ್ದಾರೆ, ಪೇಮೆಂಟ್‌ಗೆ ಹೆರಾಸ್‌ಮೆಂಟ್ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ನನ್ನ ಗಮನಕ್ಕೆ ಬಂದಿಲ್ಲ. ತಾವು ಇದರ ಬಗ್ಗೆ ಸ್ಪೆಸಿಫಿಕ್ ಇನ್ಸಿಡೆನ್ಸ್ ಕೊಟ್ಟರೆ, ನಾನು ಆ ಬಗ್ಗೆ ವಿಚಾರ ಮಾಡುತ್ತೇನೆ.

12 ಮಂಗಳೂರಿನಲ್ಲಿ ನಡೆದ ಮದುವೆ ಸಮಾರಂಭದಲ್ಲಿ ವಿಷಾದ ಪಾನೀಯ ಸೇವಿಸಿ ಮೃತರಾದ ಬಗ್ಗೆ ತನಿಖೆ ನಡೆಸುವ ವಿಚಾರ

ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ).—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೨೧-೨-೮೮ ರಂದು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಎ. ಬಿ. ಶೆಟ್ಟಿ ಸ್ಮಾರಕ ಭವನದಲ್ಲಿ ಜರುಗಿದ ವಿವಾಹ ಸಮಾರಂಭದಲ್ಲಿ ಸರಬರಾಜು ಮಾಡಿದ ಪಾನೀಯ ಹಾಗೂ ತಿಂಡಿ ಪದಾರ್ಥಗಳನ್ನು ಸೇವಿಸಿದವರ ಪೈಕಿ, ಸುಮಾರು ೧೩ಕ್ಕೂ ಮಿಕ್ಕಿ ಜನರು ಮೃತರಾಗಿದ್ದು, ಸುಮಾರು ೨೫೦ಕ್ಕೂ ಮಿಕ್ಕಿ ಜನರು ಆಸ್ಪತ್ರೆಗೆ ದಾಖಲಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ? ಕರ್ನಾಟಕ ರಾಜ್ಯದ ಜನತೆ ಈ ಸುದ್ದಿಯನ್ನು ಪತ್ರಿಕೆಗಳ ಮುಖಾಂತರ ತಿಳಿದಿರುತ್ತಾರೆ. ಪತ್ರಿಕೆಗಳವರು ಕೂಡ ಸ್ಪಷ್ಟವಾಗಿ ಈ ಪಾನೀಯ ಸರಬರಾಜು ಮಾಡಿದವರು ಯಾರೆಂಬುದಾಗಿ ಕೂಡ ಪ್ರಕಟಿಸದಿರುವುದರಿಂದ ಕರ್ನಾಟಕ ಜನತೆ ಈ ಘಟನೆಯ ಬಗ್ಗೆ ಸಂಶಯಪಡುವಂತಾಗಿದೆ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಾಗಲೀ ಅಥವಾ ಜಿಲ್ಲೆಯ ಇನ್ನಿತರ ಯಾವುದೇ ಅಧಿಕಾರಿಗಳಾಗಲೀ ಕೂಡ ಈ ಬಗ್ಗೆ ಸ್ಪಷ್ಟೀಕರಣ ನೀಡಿಲ್ಲ. ಈ ಘಟನೆಗೆ ಕಾರಣಕರ್ತರು ಯಾರು ? ಈ ಘಟನೆಯಿಂದ ಎಷ್ಟು ಮಂದಿ ವ್ಯತಪಟ್ಟಿರುತ್ತಾರೆ ? ಮತ್ತು ಎಷ್ಟು ಜನ ತೊಂದರೆಗೆ ಈಡಾಗಿದ್ದಾರೆ ? ಈ ವಿಚಾರದಲ್ಲಿ ಯಾರುಯಾರ ಮೇಲೆ ಕೇಸು ದಾಖಲಾಗಿದೆ. ಈ ಘಟನೆಯಿಂದಾಗಿ ಯಾರದೋ ತಪ್ಪಿನಿಂದ ನಿರಪರಾಧಿಗಳು ಅಸುನೀಗಿದ್ದಾರೆ. ಸರ್ಕಾರ ಮೃತಪಟ್ಟ ಕುಟುಂಬದವರಿಗೆ ಹಾಗೂ ತೊಂದರೆಗೆ ಈಡಾದವರಿಗೆ ಪರಿಹಾರ ನೀಡಬೇಕಾಗಿ ಈ ಮೂಲಕ ವಿನಂತಿಸುತ್ತೇನೆ, ಇನ್ನು ಮುಂದೆ ಯಾವುದೇ ಸಭೆ ಸಮಾರಂಭಗಳಿಗೆ ಪಾನೀಯ ಹಾಗೂ ತಿಂಡಿ ತಿನಿಸುಗಳನ್ನು ನೀಡಬೇಕಾದರೆ ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿ ಪಡೆಯುವ ವ್ಯವಸ್ಥೆಯನ್ನು ಮಾಡುವಿರಾ ? ಅಥವಾ ಸಭೆ ಸಮಾರಂಭಗಳಿಗೆ ಒದಗಿಸಲಾದ ತಿಂಡಿ ಹಾಗೂ ಪಾನೀಯಗಳನ್ನು ಪರೀಕ್ಷೆಗೆ ಒಳಪಡಿಸಿದ ನಂತರವೇ ಜನತೆಗೆ ಒದಗಿಸುವ ವ್ಯವಸ್ಥೆಯನ್ನು ಮಾಡುವಿರಾ ? ಇಲ್ಲವಾದಲ್ಲಿ ಇನ್ನು ಮುಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಸಭೆ ಸಮಾರಂಭಗಳಿಗೆ ಜನತೆ ಬಹಿಷ್ಕಾರ ಹಾಕಬಹುದು. ತಾವು ಈ ಬಗ್ಗೆ ಸವಿವರವಾದ ವಿವರಣೆಯನ್ನು ನೀಡಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ಅಧ್ಯಕ್ಷರೇ, ದಿನಾಂಕ ೨೧-೨-೮೮ ರಂದು ಬಾಜ್ಪೆ ಗ್ರಾಮದ ಸಂಜೀವಶೆಟ್ಟಿ ಎಂಬುವರ ಮಗನ ಮದುವೆಯನ್ನು ಎ. ಬಿ. ಶೆಟ್ಟಿ ಸ್ಮಾರಕದಲ್ಲಿ ನೆರೆವೇರಿಸಿದರು, ಸದರಿ ಮದುವೆಯಲ್ಲಿ ಸುಮಾರು ೨೦೦೦ ಅತಿಥಿಗಳು ಭಾಗವಹಿಸಿದ್ದರು. ಮಂಗಳೂರಿನ ಹೋಟೆಲ್ ದೀವಾನ್‌ನ ಕಡೆಯಿಂದ ಉಪಾಹಾರವನ್ನು ಏರ್ಪಡಿಸಲಾಗಿತ್ತು.